ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

NO. 1, Unnatha Shikshana Soudha, Sheshadri Road, Bangalore - 560 001 Phone: 080 22343904, email: bngcce@kar.nic.in

ಸಂಖ್ಯೆ: ಕಾಶಿಇ/ಮಾತಂವಿ/ಪಿಯುಆರ್/15/ಇನ್ಫೋ/2020 ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಕಛೇರಿ.
Computer No. 381123 ದಿನಾಂಕ: 06/09/2021

## ಸುತ್ತೋಲೆ

ವಿಷಯ : ಡಿಜಿಟಲ್ ಕಲಿಕೆ ಯೋಜನೆಯಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಐಸಿಟಿಯುಕ್ತ ಸ್ಮಾರ್ಟ್ ತರಗತಿಗಳನ್ನು ಅನುಸ್ಥಾಪನೆ ಮಾಡುವ ಬಗ್ಗೆ

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಇಡಿ/135/ಹೆಚ್‌ಪಿಸಿ/2020, ದಿ:23/09/2020
2) Tender No: DCE/2020-21/IND1049 Dated: 01-10-2020 0-21/IND1049 Dated: 01-10-2020
3. ಈ ಕಛೇರಿಯ ಖರೀದಿ ಆದೇಶ ಸಂಖ್ಯೆ: ಡಿಸಿಇ/ಐಟಿಎಸ್/ಪಿಯುಆರ್/10/2020 ದಿನಾಂಕ:31/12/2020

>>><<

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಆದೇಶದನ್ವಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2500 ಐಸಿಟಿಯುಕ್ತ ಸ್ಮಾರ್ಟ್ ತರಗತಿಗಳನ್ನು ಅನುಸ್ಥಾಪಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿರುತ್ತದೆ. ಈ ಸಂಬಂಧ ಉಲ್ಲೇಖ(2)ರಂತೆ ಟೆಂಡರ್ ಕರೆದು, ಎಲ್-1 ಬಿಡ್‌ದಾರ ಸಂಸ್ಥೆಯಾಗಿರುವ ಇಂಟೆಲಿಕ್ ಸಿಸ್ಟಂಸ್ ಸಂಸ್ಥೆಗೆ ಉಲ್ಲೇಖ(3)ರನ್ವಯ ಖರೀದಿ ಆದೇಶವನ್ನು ನೀಡಲಾಗಿರುತ್ತದೆ. ಸದರಿ ಸಂಸ್ಥೆಯು ಪ್ರಸ್ತುತ ಯೋಜನೆಯ ಶೇ. 99 ರಷ್ಟು ಕಾರ್ಯ ಪೂರ್ಣಗೊಂಡಿರುವುದಾಗಿ ಇಲಾಖೆಗೆ ಮಾಹಿತಿ ನೀಡಿದ್ದು, ಉಪಕರಣಗಳು ಕಾಲೇಜಿನಲ್ಲಿ ಅನುಸ್ಥಾಪನೆಯಾಗಿರುವ ಬಗ್ಗೆ ಹಾಗೂ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪ್ರಾಂಶುಪಾಲರುಗಳಿಂದ ಸಹಿ ಮಾಡಲ್ಪಟ್ಟಿರುವ ಅನುಸ್ಥಾಪನಾ ವರದಿ (Installation Report)ಗಳನ್ನು ಸಲ್ಲಿಸಲಾಗಿರುತ್ತದೆ. ಅನುಸ್ಥಾಪಿಸಲಾಗಿರುವ ಉಪಕರಣಗಳ ಸುರಕ್ಷತೆಯ ಪೂರ್ಣ ಜವಾಬ್ದಾರಿ ಪ್ರಾಂಶುಪಾಲರುಗಳದ್ದಾಗಿರುತ್ತದೆಯೆಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಅವುಗಳು ಹಾನಿಗೊಳಗಾಗದಂತೆ ಹಾಗೂ ಕಳುವಾಗದಂತೆ ಪ್ರಾಂಶುಪಾಲರುಗಳು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು. ಸದರಿ ಉಪಕರಣಗಳು ಸುರಕ್ಷಿತವಾಗಿದ್ದು, ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ವಾರಕ್ಕೊಮ್ಮೆ ಎಲ್‌ಎಂಎಸ್ ಕೋಆರ್ಡಿನೇಟರ್‌ಗಳಿಂದ ಲಿಖಿತ ವರದಿಯನ್ನು ಪಡೆದುಕೊಳ್ಳತಕ್ಕದ್ದು. ಉಪಕರಣಗಳಿಗೆ ಮೂರು ವರ್ಷಗಳ ವಾರಂಟಿ ಇರುವ ಕಾರಣ ತಾಂತ್ರಿಕ ದೋಷಗಳೇನಾದರೂ ಕಂಡುಬಂದಲ್ಲಿ ಸರಬರಾಜುದಾರ ಸಂಸ್ಥೆಯ ಕಾಲ್ ಸೆಂಟರ್ ದೂರವಾಣಿ ಸಂಖ್ಯೆ: 9663005033ರ(e-mail: support@intellic.co.in) ಮೂಲಕ ಸಂಪರ್ಕಿಸಿ ದುರಸ್ತಿಗೆ ಕ್ರಮ ಕೈಗೊಳ್ಳುವುದು. ಸದರಿ ಸ್ಮಾರ್ಟ್ ತರಗತಿಗಳಿಗೆ ಅಗತ್ಯವಾಗಿರುವ ಅಂತರ್‌ಜಾಲ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.

Random ಆಗಿ ಆಯ್ಕೆ ಮಾಡಲಾದ ಕಾಲೇಜುಗಳಲ್ಲಿ ಸ್ಮಾರ್ಟ್ ತರಗತಿಗಳ ಅನುಸ್ಥಾಪನೆ, ಕಾರ್ಯನಿರ್ವಹಣೆಯನ್ನು ಪರಿಶೀಲಿಸಿ ವರದಿ ಸಲ್ಲಿಸಲು ಕೇಂದ್ರ ಕಛೇರಿ/ಪ್ರಾದೇಶಿಕ ಕಛೇರಿಯಿಂದ ಅಧಿಕಾರಿಗಳ ತಂಡ ಸಧ್ಯದಲ್ಲಿಯೇ ಕಾಲೇಜುಗಳಿಗೆ ಭೇಟಿ ನೀಡಲಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ,

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ

<u>ಪ್ರತಿಯನ್ನು</u>,

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ಗುಲ್ಬರ್ಗಾ- ಮಾಹಿತಿಗಾಗಿ ಮತ್ತು ಕಾಲೇಜುಗಳಿಂದ ಮಾಹಿತಿಗಳನ್ನು ಪೋರ್ಟಲ್‌ನಲ್ಲಿ ದಾಖಲಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
2. ಕಾಲೇಜು ಶಿಕ್ಷಣ ಆಯುಕ್ತರ/ನಿರ್ದೇಶಕರ/ಮುಖ್ಯ ಆಡಳಿತಾಧಿಕಾರಿಗಳ/ಹೆಚ್ಚುವರಿ ನಿರ್ದೇಶಕರ ಆಪ್ತ ಶಾಖೆಗೆ- ಮಾಹಿತಿಗಾಗಿ